ಹಾಗೂ ನಮ್ಮ ಗುಲ್ಬರ್ಗಾ ವಿಭಾಗದ ಜಂಟಿ ನಿರ್ದೇಶಕರಿಂದ ವರದಿಯನ್ನು ತರಿಸುತ್ತೇನೆ. ವರದಿಗಾಗಿ ಕಾಯುತ್ತಿದ್ದೇವೆ. ಆ ವರದಿಯನ್ನು ತರಿಸಿಕೊಂಡು ಅವ್ಯವಹಾರಗಳು ನಡೆದಿದ್ದ ಸಂದರ್ಭದಲ್ಲಿ ಸರ್ಕಾರ ಅವರ ವಿರುದ್ಧ ಕ್ರಮವನ್ನು ಕೈಗೊಳ್ಳುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:- ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿಯ ಚೀಫ್ ಸೆಕ್ರೆಟರಿಯವರು ಅದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅವರು ಅಲ್ಲಿಂದ ಕಳುಹಿಸುವುದಿಲ್ಲ, ತಾವೇ ಏನಾದರೂ ಅಲ್ಲಿಂದ ತರಿಸಿಕೊಳ್ಳುತ್ತೀರಾ? ಅವರು ಸಮಿತಿ ರಿಪೋರ್ಟನ್ನು ಹಾಗೆಯೇ ಇಡುತ್ತಾರೆ. ಆದಕಾರಣ ತಾವು ಇದನ್ನು ತಕ್ಷಣ ತರಿಸಿಮಾಡಬೇಕು ಎಂದು ಹೇಳುತ್ತೇನೆ.

ಡಾ॥ ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ವರದಿಯನ್ನು ನಾನು ತರಿಸಿಕೊಂಡು ಅವ್ಯವಹಾರಗಳು ನಡೆದಿರತಕ್ಕಂಥ ಸಂದರ್ಭದಲ್ಲಿ ನಾನು ಖಂಡಿತ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು:- ಸನ್ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಅಲ್ಲಿಯ ಮುಖ್ಯ ಕಾರ್ಯದರ್ಶಿಗಳು ಯಾರು ಇದ್ದಾರೆ, ಅಥವಾ ಅಲ್ಲಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾರು ಇದ್ದಾರೆ ಅವರ ಮೇಲೆ ಖಚಿತವಾದ ಆರೋಪವನ್ನು ಮಾಡುತ್ತಿದ್ದಾರೆ. ಆ ವರದಿಯನ್ನು ತರಿಸುವಾಗ ಅವರ ಮೇಲೆ ಅವಲಂಬಿತರಾಗುವುದು ಬೇಡ. ನೇರವಾಗಿ ನಿಮ್ಮ ಉಸ್ತುವಾರಿಯಲ್ಲಿ ವರದಿಯನ್ನು ತರಿಸಿಕೊಳ್ಳಿ, ನಿಷ್ಪಕ್ಷಪಾತವಾದ ವರದಿ ಬರುತ್ತದೆ ಎಂದು ಅವರ ಕಳಕಳಿ.

ಡಾ॥ ಹೆಚ್.ಸಿ.ಮಹಾದೇವಪ್ಪ:- ಅದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡುತ್ತೇನೆ.

ಡಾ॥ ಜೀವರಾಜ ಆಳ್ವ:- ಎರಡು ಪ್ರಶ್ನೆಗಳು ಇವೆ. ಒಂದು ಸನ್ಮಾನ್ಯ ಸಭಾಧ್ಯಕ್ಷರಿಗೆ, ಸಭಾಧ್ಯಕ್ಷರ ಪ್ರಶ್ನೆ ಏನು ಎಂದರೆ ಒಂದು ಪ್ರಶ್ನೆ ಕೇಳಲಿಕ್ಕೆ, ಉತ್ತರ ಬರಲಿಕ್ಕೆ ಎಷ್ಟು ಖರ್ಚಾಗುತ್ತದೆ. ಎರಡನೇ ಪ್ರಶ್ನೆ ಮಂತ್ರಿಗಳಿಗೆ. ಆಗಸ್ಟ್ ತಿಂಗಳಲ್ಲಿ ಇಷ್ಟು ದೊಡ್ಡ ತೀವ್ರತರವಾದ 1477 ಕರಳು ಬೇನೆ ಪ್ರಕರಣಗಳು, ಒಟ್ಟು 34 ಮರಣ, 1146 ವರದಿಯಾಗಿದ್ದು 30 ಮರಣ ಎಂದು ಪುನಃ ಹಾಕಿದ್ದಾರೆ, ಸದರಿ ಖರ್ಚು 9937 ಎಂದು ಇದೆ ಅದು ತಮಗೆ ಸಮಾಧಾನವಾಗಿದೆಯೆ?

ಡಾ॥ ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಸಾಂಕ್ರಾಮಿಕ ರೋಗಗಳು ಸಾಮಾನ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರವಾದಂಥ ಭಾರತದೇಶದಲ್ಲಿ ಸರ್ವೇ ಸಾಮಾನ್ಯವಾಗಿ ಬರತಕ್ಕಂಥದ್ದು.

ಅಧ್ಯಕ್ಷರು:- ನನಗೆ ಒಂದು ಪ್ರಶ್ನೆಯನ್ನು ಕೇಳಿದ್ದೀರಿ, ಅದರ ಲೆಕ್ಕ ಹಾಕಿಬಿಟ್ಟು including the savings we made by your frequent absence ನಾನು ಡೀಟೈಲ್ಸ್ ಕೊಡುತ್ತೇನೆ.

ಡಾ॥ ಜೀವರಾಜ ಆಳ್ವ:- ಅಧ್ಯಕ್ಷರು ಪ್ರೊಟೆಕ್ಷನ್ ಕೊಡುತ್ತಿಲ್ಲ, ಅದಕ್ಕೆ ಸ್ವಲ್ಪ ಫ್ರಿಕ್ವೆಂಟ್ ಅಬ್ಸೆನ್ಸ್ ಆಗುತ್ತಿದ್ದೇನೆ.

ವಿಷಯ:- ಬಿಜಾಪುರ ಸಿವಿಲ್ ಆಸ್ಪತ್ರೆಯ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 228 (1654)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲಾ ಆಸ್ಪತ್ರೆಗೆ ಕಟ್ಟಡದ ದುರಸ್ತಿಗಾಗಿ 1993-94, 94-95 ರಲ್ಲಿ ಮಾಡಿದ ಖರ್ಚು ಎಷ್ಟು?

ಆ) ಯಾವ ಯಾವ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ?

ಇ) 1995-96ನೇ ಸಾಲಿನಲ್ಲಿ ಆಯವ್ಯಯದಲ್ಲಿ ಆಸ್ಪತ್ರೆಯಲ್ಲಿ ಇನ್ನುಳಿದ ಸೌಲಭ್ಯಗಳಿಗಾಗಿ ಕೈಗೊಂಡ ಕ್ರಮಗಳೇನು?

ಈ) ಜಿಲ್ಲೆಯ ಜನರಿಗೆ ಹೆಚ್ಚಿನ ಸೌಲಭ್ಯಗಳ ಉಪಕರಣಗಳು ಮತ್ತು ಕಟ್ಟಡಗಳಿಗೆ ಮೀಸಲಾಗಿರುವ ಹಣವೆಷ್ಟು ?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) 1993-94ನೇ ಸಾಲಿನಲ್ಲಿ ರೂ. 4.21.897-00

1994-95ನೇ ಸಾಲಿನಲ್ಲಿ ರೂ. 6,01,642-00

ಆ) ವಿದ್ಯುತ್ತೀಕರಣ, ಸದರಿ ಕಟ್ಟಡಕ್ಕೆ ಸುಣ್ಣ ಮತ್ತು ಬಣ್ಣ, ಕಿಟಕಿಗಳಿಗೆ, ಬಾಗಿಲುಗಳಿಗೆ ಬಣ್ಣ ಹಚ್ಚುವುದು, ಜಲ ನಿರೋಧಕ ಮಡ್ಡಿ ಮಾಡುವುದು, ಆವರಣ ರಸ್ತೆ ದುರಸ್ಥಿ, ಸಿಂಟೆಕ್ಸ್ ಟ್ಯಾಂಕ್ ಅಳವಡಿಸುವುದು. ಶವಕೋಣೆಗಳ ಕೂಡು ರಸ್ತೆಯಲ್ಲಿ ಚಿಕ್ಕ ಸೇತುವೆ ನಿರ್ಮಾಣ, ಮೇಲ್ಚಾವಣಿಗೆ ಜಲ ನಿರೋಧಕ ಹಾಕಿರುವುದು, ಫಾರ್ಮಸಿ ವಾರ್ಡಿಗೆ ದುರಸ್ತಿ, ಇತ್ಯಾದಿ.

ಇ) ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ದಿಸೆಯಲ್ಲಿ ರೂ.90.00 ಲಕ್ಷದ ಅಂದಾಜಿಗೆ ರೂ. 30.00 ಲಕ್ಷಗಳ ಅನುದಾನ 1995-96ನೇ ಸಾಲಿಗೆ ನಿಗಧಿಪಡಿಸಿದ್ದು, ಕೆಲವೊಂದು ಮಾನದಂಡಗಳನ್ವಯ ಪರಿಷ್ಕೃತ ಅಂದಾಜು ಹಾಗೂ ನಕ್ಷೆ ತಯಾರಿಸಿಕೊಂಡು ಪ್ರಸ್ತಾವಿಸಬೇಕೆಂದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರಿಗೆ ಕೋರಲಾಗಿದೆ. ಪರಿಷ್ಕೃತ ಅಂದಾಜು ಪಟ್ಟಿ ಬಂದೊಡನೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಈ) ರಾಜ್ಯದ ಜಿಲ್ಲಾ ಆಸ್ಪತ್ರೆಗಳಿಗೆ ಉಪಕರಣಗಳನ್ನು ಒದಗಿಸುವುದಕ್ಕಾಗಿ ಒಟ್ಟು ರೂ.60.00 ಲಕ್ಷಗಳ ಅನುದಾನ ಈ ಸಾಲಿಗೆ ಇರುತ್ತದೆ. ಕಟ್ಟಡಗಳ ನಿರ್ವಹಣೆಗೆ ಮತ್ತು ದುರಸ್ತಿಗಾಗಿ ರೂ. 10.00 ಲಕ್ಷಗಳನ್ನು ಯೋಜನೆಯ ಕೆಲಸಕ್ಕೆ ರೂ. 30.00 ಲಕ್ಷಗಳನ್ನು ಆಯವ್ಯಯದಲ್ಲಿ ನಿಗಧಿ ಮಾಡಲಾಗಿದೆ.

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್:- ಸನ್ಮಾನ್ಯ ಅಧ್ಯಕ್ಷರೇ 1993-94ನೇ ಸಾಲಿನಲ್ಲಿ 4ಲಕ್ಷ 21ಸಾವಿರ 897 ರೂಪಾಯಿ, 1994-95ರಲ್ಲಿ 6ಲಕ್ಷ ಒಂದು ಸಾವಿರ 647 ರೂಪಾಯಿಗಳನ್ನು ಈ ಒಂದು ಜಿಲ್ಲಾ ಆಸ್ಪತ್ರೆಗೆ ಖರ್ಚು ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ವಾಸ್ತವಿಕವಾಗಿ ನಾವು ಆ ಜಿಲ್ಲಾ ಆಸ್ಪತ್ರೆಗೆ ಭೇಟಿ ಕೊಟ್ಟಾಗ ಯಾವುದೇ ಒಂದು ಗೋಡೆಗೆ ಬಣ್ಣ ಸುಣ್ಣ ಹಚ್ಚಿರಲಿಲ್ಲ. ಅಂತಹ ಒಂದು ಗೋಡೆ ಸಹ ಕಾಣಸಲಿಲ್ಲ. ಕೇವಲ ಹಣ ಖರ್ಚು ಹಾಕುವುದರ ಮುಖಾಂತರ ಇದರ ದುರುಪಯೋಗ ಆಗಿದೆ ಎಂದು ನನಗನಿಸುತ್ತದೆ.

ಅದೇರೀತಿ ಇನ್ನೊಂದು ಪ್ರಶ್ನೆ ಏನೆಂದರೆ ಸುಮಾರು 1995-96ನೇ ಸಾಲಿಗೆ ನಿಗದಿಪಡಿಸಿದಂತಹ 90 ಲಕ್ಷ ರೂಪಾಯಿಗಳ ಅಂದಾಜಿನ ಈ ಒಂದು ಯೋಜನೆ, ಇನ್ನೂ ಪರಿಷ್ಕೃತ ಅಂದಾಜು ಮಾನದಂಡ ನಕ್ಷೆ ಎಂದು ಹೇಳಿದ್ದಾರೆ. ಮಾನದಂಡದ ಅನ್ವಯ ಪರಿಷ್ಕೃತ ಅಂದಾಜು ಮತ್ತು ನಕ್ಷೆ ಎಂದರೆ ಏನು ಎನ್ನುವುದನ್ನು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಏನೂ ಇಲ್ಲ, ನೀವು ಮಾಟಾಳ್‌ರವರನ್ನು ಕನ್ಸಲ್ಟ್ ಮಾಡಿ, ಅವರು ನಿಮಗೆ ಗೈಡ್ ಮಾಡುತ್ತಾರೆ.

ಡಾ॥ ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲಾ ಆಸ್ಪತ್ರೆ ಸುಮಾರು 340 ಹಾಸಿಗೆಗಳನ್ನು ಹೊಂದಿದೆ. ವಿಶ್ವ ಬ್ಯಾಂಕ್‌ನ ನೆರವಿನಡಿಯಲ್ಲಿ ಅದನ್ನು 400 ಹಾಸಿಗೆಯ ಆಸ್ಪತ್ರೆಯನ್ನಾಗಿ ಏರಿಸಲಿಕ್ಕೆ ಈಗಾಗಲೇ ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಸನ್ಮಾನ್ಯ ಸದಸ್ಯರು ಏನು ಈಗಿರತಕ್ಕಂಥ ಜಿಲ್ಲಾ ಆಸ್ಪತ್ರೆಯನ್ನು ಅಲ್ಲಿಯ ಹಾಸಿಗೆಯ ಸಂಖ್ಯೆಯನ್ನು ಹೆಚ್ಚಿಸಲಿಕ್ಕೆ 90 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಹೇಳಿದ್ದಾರೋ ಆ ಅಂದಾಜಿನ ಮೂರನೆಯ ಒಂದು ಭಾಗದ ಹಣವನ್ನು ಅಂದರೆ 30ಲಕ್ಷ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಜಿಲ್ಲಾ ಸರ್ಜನ್ ಜೊತೆಯಲ್ಲಿ ಕನ್ಸಲ್ಟ್ ಮಾಡಿ ಪಿ.ಡಬ್ಲ್ಯೂ.ಡಿ.ಎಕ್ಸಿಕ್ಯುಟಿವ್ ಇಂಜಿನಿಯರ್‌ರವರನ್ನು ಕೇಳಿ ಈ ಒಂದು ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಮಾಡುತ್ತೇವೆ. ಈಗಾಗಲೇ ಬಿಜಾಪುರ ಆಸ್ಪತ್ರೆ ಆಲ್ ಅಮಿನ್ ಮೆಡಿಕಲ್ ಕಾಲೇಜಿಗೆ ಇದನ್ನು ಕೊಟ್ಟಿರುವುದರಿಂದ ಕ್ಲಿನಿಕಲ್ ಫೆಸಿಲಿಟಿಸ್‌ಗಳನ್ನು ಅಲ್ಲೂ ಕೂಡ ಕೊಟ್ಟು ಲಕ್ಷಾಂತರ ರೂಪಾಯಿಗಳು ಅಲ್ಲಿಯೂ ಕೂಡ ಇದೆ. ಅದಕ್ಕೆ ಎಕ್ವಿಪ್‌ಮೆಂಟ್‌ಗಳನ್ನು ಕೊಂಡುಕೊಳ್ಳಲಿಕ್ಕೆ ಕ್ರಮವನ್ನು ನಾನು ಕೈಗೊಳ್ಳುತ್ತೇನೆ ಎನ್ನತಕ್ಕಂಥ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಯತ್ನಾಳ್:- ಸನ್ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲಾ ಆಸ್ಪತ್ರೆಯನ್ನು ಆಲ್ ಅಮಿನ್ ಸಂಸ್ಥೆಗೆ ಒಳಪಡಿಸಿರುವುದರಿಂದ ಸರ್ಕಾರಿ ವೈದ್ಯರು ಮತ್ತು ಆಲ್‌ಅಮಿನ್ ಸಂಸ್ಥೆಯ ವೈದ್ಯರ ನಡುವೆ ಸಾಮರಸ್ಯ ಇಲ್ಲದೇ ಸರಿಯಾಗಿ ರೋಗಿಗಳನ್ನು ನೋಡುವಂಥ ಪರಿಸ್ಥಿತಿ ಅಲ್ಲಿ ಇಲ್ಲ. ಮೊನ್ನೆ ಒಬ್ಬ ಹರಿಜನ ಬಡ ಮಹಿಳೆಗೆ ರಾತ್ರಿ ಪ್ರಸವ ವೇದನೆಯಾಗಿದ್ದಾಗ ಅಂಥ ಸಮಯದಲ್ಲಿ ವೈದ್ಯರು ನಾನು ಅಟೆಂಡ್ ಮಾಡುವುದಿಲ್ಲ. ಎಂದು ಈ ಇಬ್ಬರ ಒಂದು ತಂಟೆಯಲ್ಲಿ ಆ ಹೆಣ್ಣುಮಗಳು ಆಟೋರಿಕ್ಷಾದಲ್ಲಿಯೇ ಪ್ರಸವ ವೇದನೆ ತಾಳಲಾರದೇ ಹೆರಿಗೆಯಾಗಿ ಮಗುವನ್ನು ಹಡೆಯಬೇಕಾದ ಪರಿಸ್ಥಿತಿ ಬಂತು. ಈ ರೀತಿಯ ಪರಿಸ್ಥಿತಿ ಅಂದು ನಿರ್ಮಾಣವಾಯಿತು. ದಯವಿಟ್ಟು ಸರ್ಕಾರ ಇತ್ತ ಕಡೆ ಗಮನ ಹರಿಸಿ ಈ ಸರ್ಕಾರಿ ವೈದ್ಯರು ಮತ್ತು ಆಲ್‌ಅಮಿನ್ ಸಂಸ್ಥೆಯ ವೈದ್ಯರ ನಡುವೆ ಏನು ವ್ಯತ್ಯಾಸವಿದೆ ಅದನ್ನು ಪರಿಹರಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಒಂದು ವೇಳೆ ಆಲ್‌ಅಮಿನ್ ಸಂಸ್ಥೆಯವರು ಸರಿಯಾಗಿ ಅದನ್ನು ನಡೆಸಿಕೊಂಡು ಹೋಗುವುದಕ್ಕೆ ಜವಾಬ್ದಾರಿಯನ್ನು ತೆಗೆದುಕೊಳ್ಳದೇ ಇದ್ದರೆ ಕಡಿಮೆ ಮಾಡಬೇಕು ಎಂದು ಹೇಳಿ ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಡಾ:ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಬಿಜಾಪುರ ಜಿಲ್ಲಾ ಆಸ್ಪತ್ರೆಗೆ ಖುದ್ದಾಗಿ ಬೇಟಿ ಮಾಡಿ ನಮ್ಮ ಸರ್ಕಾರಿ ವೈದ್ಯಾಧಿಕಾರಿಗಳು ಮತ್ತು ಆಲ್‌ಅಮಿನ್ ಸಂಸ್ಥೆಯ ವೈದ್ಯಾಧಿಕಾರಿಗಳ ಜೊತೆಯಲ್ಲಿ ಸಂಪರ್ಕ ನಡೆಸಿ ನಾನು ಇದರ ಬಗ್ಗೆ ಚರ್ಚೆ ಮಾಡಿದ್ದೇನೆ.

ಆಲ್‌ಆಮಿನ್. ವೈದ್ಯಕೀಯ ಸಂಸ್ಥೆಯ ವೈದ್ಯಾಧಿಕಾರಿಗಳು ಮತ್ತು ಸರ್ಕಾರದ ವೈದ್ಯಾಧಿಕಾರಿಗಳು ಸಂಯುಕ್ತ ಜವಾಬ್ದಾರಿಯನ್ನು ಹೊತ್ತು ಜನಸಾಮಾನ್ಯರಿಗೆ ಆರೋಗ್ಯ ಸವಲತ್ತನ್ನು ಕೊಡಬೇಕು ಎಂಬುದರ ಜೊತೆಗೆ ಸರ್ಕಾರಿ, ವೈದ್ಯರಿಗೆ ಗೈನಿಕಾಲಜಿ ಅಬ್ಸೆಟ್ರೀಷಿಯನ್ ಗೈನೋಕಾಲಜಿಗೆ ಪ್ರತ್ಯೇಕವಾದಂಥ ಯುನಿಟ್ಟನ್ನು ಕೂಡ ತೆರೆಯಲಿಕ್ಕೆ ನಾನು ಅನುಮತಿಯನ್ನು ಕೊಟ್ಟು ಬಂದಿದ್ದೇನೆ. ಇಂಥ ಪ್ರಕರಣಗಳು ನಡೆಯದ ರೀತಿಯಲ್ಲಿ ಕಟ್ಟುನಿಟ್ಟಿನ ಆದೇಶವನ್ನು ಕೊಡುವುದರ ಜೊತೆಗೆ ಖಾಸಗಿ ಕಾಲೇಜುಗಳು ಸರ್ಕಾರಿ ಆಸ್ಪತ್ರೆಯನ್ನು ದುರುಪಯೋಗವಾಗಿ ಬಳಸಿಕೊಂಡು ಜನಸಾಮಾನ್ಯರಿಗೆ ತೊಂದರೆಯನ್ನು ಕೊಟ್ಟಿಗೆ ಅವರಿಗೆ ಸರ್ಕಾರದ ವತಿಯಿಂದ ಕೊಡತಕ್ಕಂಥ ಕ್ಲಿನಿಕಲ್ ಸೌಲಭ್ಯವನ್ನು ಹಿಂತೆಗೆದುಕೊಳ್ಳಲಿಕ್ಕೆ ಸರ್ಕಾರ ಆಲೋಚನೆ ಮಾಡುತ್ತದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಮಂಜುನಾಥ್(ಉನ್ನತ ಶಿಕ್ಷಣ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 6ನೇ ಸೆಪ್ಟೆಂಬರ್ 1995ರ 16 ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 67 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ವಿಷಯ:- ಸರ್ಕಾರಿ ಕಾಲೇಜು ಮತ್ತು ವಿ.ವಿ.ಗಳ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1650 (1965)

ಶ್ರೀ ಆಯನೂರು ಮಂಜುನಾಥ (ಹೊಸನಗರ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ರಾಜ್ಯದ ಸರ್ಕಾರಿ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವರ ಸಂಖ್ಯೆ ಎಷ್ಟು ಇವರಿಗೆ ನೀಡುತ್ತಿರುವ ವೇತನ ಎಷ್ಟು?

ಆ)ಎಷ್ಟು ವರ್ಷಗಳಿಂದ, ಯಾವ ಯಾವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವರು? (ವಿವರವನ್ನೊದಗಿಸುವುದು)

ಇ)ಇವರ ಸೇವೆ ಅವಶ್ಯವೆಂಬ ವಿಷಯ ನಿಜವೇ?

ಈ) ಈ ಸಂಸ್ಥೆಗಳಲ್ಲಿ ಖಾಲಿ ಇರುವ ಸ್ಥಾನಗಳೆಷ್ಟು?

ಉ) ಖಾಲಿ ಇರುವ ಸ್ಥಾನಗಳಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ಭರ್ತಿ ಮಾಡಿ ಖಾಯಂಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಊ)ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಯಾವ ದಿನದಿಂದ ಈ ಪ್ರಕ್ರಿಯೆಯನ್ನು ಸರ್ಕಾರ ಪ್ರಾರಂಭಿಸಿರುವುದು?

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):-

ಅ) 1) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ	-2368
2)ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ	-2334
ಒಟ್ಟು	4700